ಸಂಖ್ಯೆ:ಕಾಶಿಇ/ತೃವಿ/ಪ್ಲಾಗ್ ಓಟ/2018-19

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಅರಮನೆ ರಸ್ತೆ, ಬೆಂಗಳೂರು-01.
ದಿ:18.09.2018

# ಸುತ್ತೋಲೆ

**ವಿಷಯ:** ಬೆಂಗಳೂರು ನಗರವನ್ನು ಪ್ಲಾಸ್ಟಿಕ್ ತ್ಯಾಜ್ಯದಿಂದ ಮುಕ್ತಗೊಳಿಸಲು ಆಯೋಜಿಸುತ್ತಿರುವ "ಪ್ಲಾಗ್ ರನ್" ತಂಡ ಪ್ಲಾಗ್ ಓಟದಲ್ಲಿ ಭಾಗವಹಿಸಲು ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಖಾಸಗಿ ಅನುದಾನಿತ ಕಾಲೇಜುಗಳಿಂದ ವಿದ್ಯಾರ್ಥಿಗಳನ್ನು ಕಳುಹಿಸಿಕೊಡುವ ಕುರಿತು.

**ಉಲ್ಲೇಖ:** ವಿಶೇ.ಆಯು(ಎಚ್ & ಎಸ್‌ಡಬ್ಲ್ಯೂಎಂ)/ಪಿಆರ್/268/18-19 ದಿನಾಂಕ:05-09-2018

*************

ಪ್ಲಾಸ್ಟಿಕ್ ತನ್ನ ಹಗುರತೆ. ತಾಳಿಕೆ ಮತ್ತು ಅಲ್ಪವೆಚ್ಚದಿಂದ ಜನಜೀವನದ ಅವಿಭಾಜ್ಯ ಅಂಗವಾಗಿದೆ. ಆದರೆ ಪ್ಲಾಸ್ಟಿಕ್ ಪರಿಸರಕ್ಕೆ ಉಂಟುಮಾಡುತ್ತಿರುವ ಅಪಾರ ಹಾನಿಯ ಬಗ್ಗೆ ಅನೇಕರು ಗಂಭೀರವಾಗಿ ಮತ್ತು ತುರ್ತಾಗಿ ಆಲೋಚಿಸುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ "ಪ್ಲಾಗ್ ರನ್" ತಂಡ ಬೆಂಗಳೂರು ನಗರವನ್ನು ಪ್ಲಾಸ್ಟಿಕ್ ತ್ಯಾಜ್ಯದಿಂದ ಮುಕ್ತಗೊಳಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ನಮ್ಮ ನಿಮ್ಮ ಸೈಕಲ್ ಪ್ರತಿಷ್ಠಾನದ ಸಹಭಾಗಿತ್ವದಲ್ಲಿ ನಗರದ ಆಯ್ದ 50 ಬಡಾವಣೆಗಳಲ್ಲಿ ಪ್ಲಾಗ್ ಓಟವನ್ನು ದಿನಾಂಕ: 02-10-2018ರಂದು ಆಯೋಜಿಸುತ್ತಿದೆ. ಈ ಓಟದ ಉದ್ದೇಶ ಪ್ಲಾಸ್ಟಿಕ್ ಬಳಕೆಯನ್ನು ಮಿತಿಗೊಳಿಸುವ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಮತ್ತು ಜಾಗಿಂಗ್ ಮಾಡುತ್ತಾ ರಸ್ತೆ ಬದಿಯಲ್ಲಿ ಕಂಡುಬರುವ ಪ್ಲಾಸ್ಟಿಕ್ ತ್ಯಾಜ್ಯವನ್ನು ಸಂಗ್ರಹಿಸುವುದಾಗಿರುತ್ತದೆ. ಕಾಲೇಜಿನ ಸನಿಹದ ಬಿ.ಬಿ.ಎಂ.ಪಿ ಕಚೇರಿಯು ಸುತ್ತ ಗುರುತು ಮಾಡಿರುವ ಐದು ಕಿ.ಮೀ. ಪರಿಮಿತಿಯಲ್ಲಿ ಜಾಗಿಂಗ್/ನಡಿಗೆ/ಓಟ ಮಾಡುತ್ತಾ ಪ್ಲಾಸ್ಟಿಕ್ ತ್ಯಾಜ್ಯವನ್ನು ಅವರಿಗೆ ನೀಡಲಾಗುವ ಸಲಕರಣೆಗಳ ಸಹಾಯದಿಂದ ಸಂಗ್ರಹಿಸಬೇಕಾಗುತ್ತದೆ.

ಈ ಓಟ ಕೆಳಕಂಡ ಅಂಶಗಳನ್ನು ಒಳಗೊಂಡಿದೆ:

ಅ) ಸ್ಥಳದಲ್ಲಿ ಸೇರುವುದು ಆ) ಸಲಕರಣೆಗಳನ್ನು ಪಡೆದುಕೊಳ್ಳುವುದು ಇ) ಲಘು ವ್ಯಾಯಾಮ ಈ) ಓಟ ಮತ್ತು ತ್ಯಾಜ್ಯ ಸಂಗ್ರಹಣೆ ಉ) ಓಟ ಮುಕ್ತಾಯ ಊ) ತ್ಯಾಜ್ಯಗಳ ಬೇರ್ಪಡಿಸುವಿಕೆ ಋ) ಬಿಬಿಎಂಪಿಗೆ ಹಸ್ತಾಂತರ ಎ) ಸ್ವಚ್ಛ ನಗರದ ಕನಸು ಸಾಕಾರ

ನಾಳಿನ ಸ್ವಚ್ಛ ಮತ್ತು ನಿರ್ಮಲ ಪರಿಸರದ ಸಂಪೂರ್ಣ ಹೊಣೆ ಯುವಜನತೆಯದಾಗಿದ್ದು. ಅವರು ಪ್ಲಾಗ್-ಓಟದಂಥ ಪರಿಸರ ಪೂರಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಅತ್ಯಂತ ಅಪೇಕ್ಷಣೀಯವಾಗಿರುತ್ತದೆ. ಆದ್ದರಿಂದ ಈ ಸುತ್ತೋಲೆಯ ಜೊತೆಗೆ ಲಗತ್ತಿಸಿರುವ ಪಟ್ಟಿಯಲ್ಲಿನ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಹಾಗು ಖಾಸಗಿ ಅನುದಾನಿತ ಕಾಲೇಜುಗಳ ಎನ್.ಸಿ.ಸಿ. ಎನ್.ಎಸ್.ಎಸ್ ಮತ್ತು ಇತರ ಆಸಕ್ತ 50 ಜನ ವಿದ್ಯಾರ್ಥಿಗಳನ್ನು ಒಬ್ಬ ಅಧ್ಯಾಪಕರ ಮೇಲ್ವಿಚಾರಣೆಯಲ್ಲಿ ದಿನಾಂಕ:02-10-2018ರಂದು ಪ್ಲಾಗ್ ಓಟದಲ್ಲಿ ಪಾಲ್ಗೊಳ್ಳಲು ಕಳುಹಿಸಿಕೊಡಬೇಕಾಗಿ ಸೂಚಿಸಿದೆ

ಕಾಲೇಜು ಶಿಕ್ಷಣ ಆಯುಕ್ತರು

ಪ್ರತಿಯನ್ನು,

1. ವಿಶೇಷ ಆಯುಕ್ತರು. ಬಿ.ಬಿ.ಎಂ.ಪಿ. ಬೆಂಗಳೂರು
2. ಜಂಟಿ ನಿರ್ದೇಶಕರು. ಬೆಂಗಳೂರು ಪ್ರಾದೇಶಿಕ ಕಛೇರಿ. ಕಾಲೇಜು ಶಿಕ್ಷಣ ಇಲಾಖೆ. ಬೆಂಗಳೂರು
3. ಕುಲಸಚಿವರು. ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ. ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
4. ವ್ಯವಸ್ಥಾಪಕ ಟ್ರಸ್ಟಿಗಳು/ಮುಖ್ಯಸ್ಥರು. ನಮ್ಮ ನಿಮ್ಮ ಸೈಕಲ್ ಫೌಂಡೇಷನ್. ಬೆಂಗಳೂರು
5. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು. ಮಾಹಿತಿ ತಂತ್ರಜ್ಞಾನ ವಿಭಾಗ. ಕೇಂದ್ರ ಕಛೇರಿ. ಬೆಂಗಳೂರು ವೆಬ್‌ಸೈಟ್‌ನಲ್ಲಿ ಅಳವಡಿಸಲು
6. ಕಛೇರಿ ಪ್ರತಿ.

## ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಒಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪಟ್ಟಿ

| ಕ್ರಮ ಸಂಖ್ಯೆ | ಕಾಲೇಜಿನ ಹೆಸರು |
|---|---|
| 1 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಜಯನಗರ |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ವಿಜಯನಗರ |
| 3 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಹೆಚ್.ಎಸ್.ಆರ್. ಲೇಔಟ್ |
| 4 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ರಾಜಾಜಿನಗರ |
| 5 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಮಲ್ಲೇಶ್ವರಂ |
| 6 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಕೆಂಗೇರಿ |
| 7 | ಜ್ಯೋತಿ ನಿವಾಸ್ ಕಾಲೇಜು. ಕೋರಮಂಗಲ |
| 8 | ನ್ಯಾಷನಲ್ ಕಾಲೇಜು. ಬಸವನಗುಡಿ |
| 9 | ಎಂ.ಎಲ್.ಎ. ಕಾಲೇಜು. ಮಲ್ಲೇಶ್ವರಂ |
| 10 | ಎಂ.ಇ.ಎಸ್. ಕಾಲೇಜು. ಮಲ್ಲೇಶ್ವರಂ |
| 11 | ನ್ಯಾಷನಲ್ ಕಾಲೇಜು. ಜಯನಗರ |
| 12 | ಮೌಂಟ್ ಕಾರ್ಮೆಲ್ ಕಾಲೇಜು. ವಸಂತನಗರ |
| 13 | ಹೆಚ್.ಕೆ.ಇ.ಎಸ್. ಕಾಲೇಜು. ಸದಾಶಿವನಗರ |
| 14 | ಕೆ.ಎಲ್.ಇ. ಕಾಲೇಜು. ರಾಜಾಜಿನಗರ |